**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 721/2024**

**ಚಾ.ಸಾ.** 6

**ಪ್ರಾ.ಸಾ.** 4

**ದಿನಾಂಕಃ19.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ದರ್ಶನ ಸಾವಂತನ್ನವರ |
| ತಂದೆಃ ಗಂಡನ ಹೆಸರು | ಸುರೇಶ |
| ಉದ್ಯೋಗ | ವ್ಯವಸಾಯ |
| ವಯಸ್ಸು | 21 |
| ವಾಸಸ್ಥಳ | ಬಿ. ಗುಡಿಹಾಳ |

**ಪ್ರಾರಂಭ ಸಮಯಃ 05.10. ಪಿ ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಮೃತ ಚಂದ್ರವ್ವ ನನ್ನ ತಾಯಿ. ಪ್ರಾಸಾ1 ನನ್ನ ತಂದೆ. ಆಪಾದಿತನ ನನ್ನ ಅಣ್ಣ. ಚಾಸಾ2 ರಿಂದ 5 ಮತ್ತು 7 ರಿಂದ 11 ನನಗೆ ಗೊತ್ತು.

ಸುಮಾರು 1 ವರ್ಷದ ಹಿಂದೆ ಆದಂತಹ ರಸ್ತೆಯ ಅಪಘಾತದಲ್ಲಿ ನನ್ನ ತಾಯಿ ಮರಣ ಹೊಂದಿರುತ್ತಾಳೆ. ಅಪಘಾತವು ಕಲಘಟಗಿ-ಹುಲಕೊಪ್ಪ ರಸ್ತೆಯ ಮೇಲೆ ಆಗಿರುತ್ತದೆ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ಅಪಘಾತದ ಸ್ಥಳದಲ್ಲಿ ನೆರೆದಂತಹ ಜನರನ್ನು ನೋಡಿ ನಾನು ಘಟನಾ ಸ್ಥಳಕ್ಕೆ ಹೋದೆ. ಸ್ಥಳದಲ್ಲಿ ನನ್ನ ತಾಯಿ ಬಿದ್ದಿದ್ದಳು. ಆಕೆಯ ಮುಖ ಮತ್ತು ದೇಹದ ಇತರೆ ಭಾಗಗಳಿಗೆ ಗಾಯಗಳಾಗಿದ್ದವು. ನಂತರ ಖಾಸಗಿ ವಾಹನದಲ್ಲಿ ನಾನು ಮತ್ತು ನನ್ನ ತಂದೆ ಸೇರಿ ನನ್ನ ತಾಯಿಯನ್ನು ಹುಬ್ಬಳ್ಳಿಯ ಶಕುಂತಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ದಿಃ03.11.2023 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ನನ್ನ ತಾಯಿ ಮರಣ ಹೊಂದಿದ್ದರು. ನಂತರ ಅಪಘಾತಪಡಿಸಿದ ವಾಹನ ಯಾವುದು ಮತ್ತು ಅಪಘಾತ ಹೇಗೆ ಆಯಿತು ಎಂದು ಗೊತ್ತಿಲ್ಲ. ನಾನು ಪೊಲೀಸ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ದಿಃ01.11.2023 ರಂದು ಬಿ. ಗುಡಿಹಾಳ-ಗಳಗಿ ಹುಲಕೊಪ್ಪ ರಸ್ತೆಯ ಮೇಲೆ ನಮ್ಮ ಜಮೀನಿನ ಹತ್ತಿರ ಸಂಜೆ 4.00 ಗಂಟೆ ಸಮಯದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಮತ್ತು ಪ್ರಾಸಾ1 ರವರು ಹೊಲದಲ್ಲಿ ಇದ್ದೆವು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ತಾಯಿ ಮತ್ತು ಆಪಾದಿತನಿಗೆ ತರಕಾರಿ ತೆಗೆದುಕೊಂಡು ಹೋಗಲು ಬನ್ನಿ ಎಂದು ಹೇಳಿದೆ ಎಂದರೆ ಸರಿಯಲ್ಲ. ಆಪಾದಿತನು ತನ್ನ ಹೆಸರಿನಲ್ಲಿರುವ ವಾಹನ ಸಂಖ್ಯೆ ಕೆ25-ಇವಿ-7241 ದಲ್ಲಿ ನನ್ನ ತಾಯಿಯನ್ನು ಕುರಿಸಿಕೊಂಡು ಅಜಾಗರೂತೆಯಿಂದ ಚಾಲನೆ ಮಾಡಿ ರಸ್ತೆಯ ಮೇಲೆ ಬೀಳುವಂತೆ ಮಾಡಿದರು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಜನ ಸೇರಿದ್ದರು ಎಂದರೆ ಸರಿ. ಅದನ್ನು ನೋಡಿ ನಾನು ಸ್ಥಳಕ್ಕೆ ಹೋದೆ ಎಂದರೆ ಸರಿ. ಅಪಘಾತದ ವಿಚಾರವನ್ನು ಅಲ್ಲಿ ಇದ್ದಂತಹ ಆಪಾದಿತನನ್ನು ಕೇಳಿ ತಿಳಿದುಕೊಂಡೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ತಲೆಯ ಹಿಂಬದಿ ಭಾರಿ ಗಾಯವಾಗಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಮತ್ತು ಚಾಸಾ7 ರಿಂದ 9 ಹಾಗೂ ಆಪಾದಿತ ಸೇರಿಕೊಂಡು ಖಾಸಗಿ ವಾಹನದದಲ್ಲಿ ನನ್ನ ತಾಯಿಯನ್ನು ಆಸ್ಪತ್ರಗೆ ಕರೆದುಕೊಂಡು ಹೋದೆವು ಎಂದರೆ ಸರಿ. ಆಪಾದಿತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ದಿಃ 03.11.2023 ರಂದು ನನ್ನ ತಾಯಿ ಮರಣ ಹೊಂದಿದ್ದರು ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಆಯ್ದ ಭಾಗವನ್ನು ನಿಪಿ12 ಎಂದು ಗುರುತಿಸಲಾಯಿತು. ಆಪಾದಿತನು ನನ್ನ ಅಣ್ಣನಾಗಿರುವುದರಿಂದ ಅವನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ. ಎಮ್ ಬಿ ಡಿ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**